ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 21-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನಗರಸಭಾ ಕಾರ್ಯಲಯ ಉಡುಪಿರವರು Sathyasai Multi Specialty Eye Hospital ಗೆ ಕೊಟ್ಟ ಪರವಾನಿಗೆಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ನೋಡಿ ಸದ್ರಿ ಪರವಾನಿಗೆಯನ್ನು ನನ್ನ ಅಣ್ಣನಿಗೆ ಕೊಟ್ಟಿರುತ್ತಾರೆ ಎಂದು ಒಪ್ಪಿಕೊಂಡ ಮೇರೆಗೆ ಸದ್ರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ವಾಣಿಜ್ಯ ತೆರಿಗೆ ಇಲಾಖೆಯವರು ಕೊಟ್ಟ ನಮೂನೆ -2 , ನೊಂದಾವಣಿ ಪ್ರಮಾಣ ಪತ್ರ ಮತ್ತು ಪ್ರಮಾಣ ಪತ್ರಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಇಲಾಖೆಯವರು ತನ್ನ ಅಣ್ಣನಿಗೆ ಕೊಟ್ಟ ನಮೂನೆ-2 ಮತ್ತು ತನ್ನ ಅಣ್ಣ ಸದ್ರಿ ಇಲಾಖೆಗೆ ಕೊಟ್ಟ ಪ್ರಮಾಣ ಪತ್ರ ಎಂದು ಒಪ್ಪಿಕೊಂಡಿದ್ದರಿಂದ, ಸದ್ರಿ ದಾಖಲೆಗಳನ್ನು ನಿಡಿ 3 ರಿಂದ 5 ಎಂದು ಗುರುತಿಸಲಾಯಿತು. Sathyasai Multi Specialty Eye Hospital and Optical ನ ಆಸ್ಪತ್ರೆಗೆ ಸಂಬಂಧಪಟ್ಟಂತೆ ಸದ್ರಿ ಆಸ್ಪತ್ರೆಯ ಹೆಸರಿನಲ್ಲಿ ನನ್ನ ಅಣ್ಣ ಒಂದನೇ ಪ್ರತಿವಾದಿ ಆದಾಯ ತೆರಿಗೆಯನ್ನು ಕಟ್ಟುತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಆಸ್ಪತ್ರೆಯ ಆದಾಯ ತೆರಿಗೆ ಮಾತ್ರವಲ್ಲ ನನ್ನ ಆದಾಯ ತೆರಿಗೆಯನ್ನು ಕೂಡ 2020 ರವರೆಗೆ ನನ್ನ ಅಣ್ಣ ಒಂದನೇ ಪ್ರತಿವಾದಿಯೇ ಕಟ್ಟುತಿದ್ದರು ಎಂದು ತಿಳಿಸಿರುತ್ತಾರೆ . ಸದ್ರಿ ಆಸ್ಪತ್ರೆಗೆ ಸಂಬಂಧಪಟ್ಟ ಎಲ್ಲಾ Instruments ಗಳನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ಖರೀದಿಸಿದ್ದರು ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದರು ಎಂದು ತಿಳಿಸಿರುತ್ತಾರೆ. 2002-03 ರಲ್ಲಿ ಸದ್ರಿ ಸಲಕರಣೆಯನ್ನು ಖರೀದಿಸಲಾಗಿದೆ. ಎಷ್ಟು ಹಣಕ್ಕೆ ಖರೀದಿಸಲಾಗಿದೆ ಎಂಬ ಬಗ್ಗೆ ನನಗೆ ನೆನಪಿಲ್ಲ. ಒಟ್ಟು

ಕುಟುಂಬದ ಹಣದಿಂದ ಖರೀದಿಸಲಾಗಿದೆ ಎಂಬ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ . ಸಾಕ್ಷಿ ಮುಂದುವರಿದು ನನ್ನ ಅಣ್ಣನ ಬಳಿ ಬೇರೆ ಯಾವುದೇ ಹಣ ಇರಲಿಲ್ಲ ಅದು ಕುಟುಂಬದ ಹಣದಿಂದಲೇ ಖರೀದಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಅವರ ಆಸ್ಪತ್ರೆಗೆ ಲಿಪ್ಟ್ ಕೂಡ ಅಳವಡಿಸಲಾಗಿದೆ ಎಂದರೆ ಸರಿ. ಸದ್ರಿ ಆಸ್ಪತ್ರೆಗೆ 20 ಕೆವಿ ಜನರೇಟರ್ ಕೂಡ ಅಳವಡಿಸಲಾಗಿದೆ ಎಂದರೆ ಸರಿ . ಸದ್ರಿ ಲಿಪ್ಟ್ ಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ಎಂದು ನನಗೆ ನೆನಪಿಲ್ಲ. ಯಾವ ಕಂಪೆನಿಯ ಲಿಫ್ಟ್ ನ್ನು ಅಳವಡಿಸಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ECE Company ಎಂದು ತಿಳಿಸಿರುತ್ತಾರೆ . ಈಗ ಸದ್ರಿ ಕಂಪೆನಿಯ ಹೆಸರನ್ನು ಬದಲಾಯಿಸಿರುತಾರೆ ಎಂದು ಸಾಕ್ಷಿ ತಿಳಿಸಿರುತ್ತಾರೆ . Sathyasai Multi Specialty Eye Hospital ನ ಬ್ಯಾಂಕ್ ಖಾತೆ ಕೆನರಾ ಬ್ಯಾಂಕ್ ಟೌನ್ ಬ್ರಾಂಚ್ ನಲ್ಲಿ ಇತ್ತು ಎಂದರೆ ನನಗೆ ನೆನಪಿಲ್ಲ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತಾರೆ . Sathyasai Multi Specialty Eye Hospital ಬ್ಯಾಂಕ್ ಖಾತೆಯಿಂದಲೇ ECA Company ಗೆ ಚೆಕ್‌ನಿಂದ ಹಣ ಪಾವತಿಸಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಆಸ್ಪತ್ರೆಗೆ ಖರೀದಿಸಿದ ಎಲ್ಲಾ ಸಲಕರಣೆಗಳ ಬಿಲ್ಲುಗಳ ಕೂಡ ನನ್ನ ಅಣ್ಣನ ಹೆಸರಿನಲ್ಲಿ ಇದೆ ಎಂದರೆ ಸರಿ. ಕೆಲವು ಸಲಕರಣೆಗಳನ್ನು ಪಾಂಡಿಚೇರಿಯ APPA SWAMY MEDICAL ELECTRONICS ನಿಂದ ತರಿಸಲಾಗಿದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ. Sathyasai Multi Specialty Eye Hospital ಗೆ ಸಲಕರಣೆಗಳನ್ನು ಖರೀದಿಸಲು ನಿಮ್ಮ ಪಾಲಿನ ಹಣ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲಾ ಕುಟುಂಬದ ಹಣ ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ರಿಟನ್ಸ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದರಲ್ಲಿ ಇರುವ ಸಹಿ ತಮ್ಮದು ಎಂದು ಒಪ್ಪಿಕೊಂಡ ಮೇರೆಗೆ ಸದ್ರಿ ದಾಖಲೆಯನ್ನು ನಿಡಿ -6 ಎಂದು ಗುರುತಿಸಲಾಯಿತು. ನಿಡಿ 6 ರಲ್ಲಿ Sathyasai Multi Specialty Eye Hospital ಗೆ ತೊಡಗಿಸಿರುವ ಹಣ 0 (ಸೊನ್ನೆ ) ಎಂದು ಕಾಣಿಸಲಾಗಿದೆ ಎಂದರೆ ಸಾಕ್ಷಿ ಅದರ

ಬಗ್ಗೆ ನನಗೆ ಮಾಹಿತಿ ಇಲ್ಲ ಸಹಿ ಮಾತ್ರ ತನ್ನದು ಎಂದು ತಿಳಿಸಿರುತಾರೆ. ಸಾಕ್ಷಿಗೆ Sathyasai Multi Specialty Eye Hospital ಗೆ ಸಂಬಂಧಪಟ್ಟ ಫಾರಂ ನಂ 2 ಡಿ ಸರಳ್ ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಎಲ್ಲಾ ದಾಖಲೆಗಳನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ತಯಾರಿಸುತಿದ್ದರು, ಸಹಿ ಮಾತ್ರ ಪಡೆಯುತಿದ್ದರು ಎಂದು ತಿಳಿಸಿರುತ್ತಾರೆ.

Toyota Liva ಕಾರನ್ನು 2011 ರಲ್ಲಿ ನಾನು ಖರೀಸಿದ್ದೇನೆ ಎಂದರೆ ಸರಿ . ಸದ್ರಿ ಕಾರಿನ ಮೌಲ್ಯ 705000/- ಅದಕ್ಕೆ ಆಕ್ಸಿಸ್ ಬ್ಯಾಂಕ್ ನಿಂದ 5 ಲಕ್ಷ ಸಾಲವನ್ನು ನನ್ನ ಹೆಸರಿನಲ್ಲಿ ಪಡೆದಿದ್ದೇನೆ . ಉಳಿದ ಹಣವನ್ನು ನಾನು ನಗದಿನ ರೂಪದಲ್ಲಿ ಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರಿದು ನಾನು ಮತ್ತು ನನ್ನ ಅಣ್ಣ ಒಟ್ಟಿಗೆ ಶೋ ರೂಂ ಹೋಗಿ ಸದ್ರಿ ಕಾರನ್ನು ಖರೀದಿಸಿರುತ್ತೇವೆ ಎಂದು ತಿಳಿಸಿರುತ್ತಾರೆ . ನಾನು ಸದ್ರಿ ಕಾರನ್ನು 2025 ರಲ್ಲಿ ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ . ನಾನು ರೂ 50000/- ಗಳಿಗೆ ಸದ್ರಿ ಕಾರನ್ನು ಮಾರಾಟ ಮಾಡಿರುತ್ತೇನೆ. 2025 ರಲ್ಲಿ Toyota Glanza ಹೊಸ ಕಾರನ್ನು ಖರೀದಿಸಿರುತ್ತೇನೆ ಎಂದರೆ ಸರಿ . ಸದರಿ ಕಾರಿನ ಮೌಲ್ಯ ರೂ 8 ಲಕ್ಷ ದಿಂದ 9 ಲಕ್ಷದವರೆಗೆ ಇರುತ್ತದೆ . ಸದ್ರಿ ಕಾರನ್ನು ಖರೀದಿಸಲು ಹಣವನ್ನು ಹೇಗೆ ಮಾಡಿದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 7 ಲಕ್ಷ ಸಾಲ ಉಳಿದ ಹಣವನ್ನು ನನ್ನ ಸ್ನೇಹಿತರಿಂದ ಪಡೆದಿರುತ್ತೇನೆ ಎಂದು ತಿಳಿಸಿರುತ್ತಾರೆ. ಆಕ್ಸಿಸ್ ಬ್ಯಾಂಕ್ ನಿಂದ ಸಾಲ ಪಡೆದಿದ್ದ 5 ಲಕ್ಷವನ್ನು ಯಾವಾಗ ಸಾಲ ಕಟ್ಟಿದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ಒಟ್ಟು ಕುಟುಂಬದ ಹಣದಿಂದ ನನ್ನ ಅಣ್ಣನೇ ಸಾಲ ಕಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. Toyota Liva ಕಾರನ್ನು ಖರೀದಿಸಲು ನನ್ನ ವೈಯಕ್ತಿಕ ಹಣ ಯಾವುದು ಇರಲಿಲ್ಲ. ಸಾಲ ಬಿಟ್ಟು ಉಳಿಕೆ ಕೊಟ್ಟ ಹಣ ಒಟ್ಟು ಕುಟುಂಬದ ಹಣವಾಗಿರುತ್ತದೆ. ರೂ 50000 ಗೆ Toyota Liva ಕಾರನ್ನು ಮಾರಾಟ ಮಾಡಿದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. Toyota Liva ಕಾರನ್ನು ಯಾರಿಗೆ ಮಾರಾಟ ಮಾಡಿದೇ ಎಂದು ನನಗೆ ನೆನಪಿಲ್ಲ. ಸದ್ರಿ ರೂ 50000/- ಹಣವನ್ನು ಏನು ಮಾಡಿದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ Grocery shop ಗೆ ಅಕ್ಕಿ ಬೇಳೆ ತೆಗೆದುಕೊಳ್ಳಲು ಕೊಟ್ಟಿದ್ದೇನೆ ಎಂದು ತಿಳಿಸಿರುತ್ತಾರೆ. ಸದ್ರಿ ಹಣವನ್ನು ನಿಮ್ಮ ಸ್ವಂತ ಖರ್ಚಿಗೆ ಬಳಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹೌದು ಎಂದು ತಿಳಿಸಿರುತ್ತಾರೆ . ಸದ್ರಿ ರೂ 50000 ಹಣಕ್ಕೂ ಕುಟುಂಬಕ್ಕೂ ಸಂಬಂಧ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸಂಬಂಧ ಇದೆ ಕಾರಣ ಕಾರನ್ನು ಕುಟುಂಬದ ಹಣದಿಂದಲೇ ಖರೀದಿಸಿದ್ದೇವೆ ಎಂದು ತಿಳಿಸಿರುತ್ತಾರೆ. Sathyasai Multi Specialty Eye

Hospital ನ್ನು ಮುಚ್ಚಿದ ನಂತರ ಅಲ್ಲಿ ಇದ್ದ ಸಲಕರಣೆಗಳನ್ನು Saisadana apartment ಒಂದು ಕೋಣೆಯಲ್ಲಿ ಇರಿಸಲಾಯಿತು. Saisadana apartment ನ ಕೀ ನನ್ನ ಅಣ್ಣನ ಬಳಿ ಇತ್ತು . ಆಸ್ಪತ್ರೆಯನ್ನು ಮುಚ್ಚಿದಾಗ ಆಸ್ಪತ್ರೆಯಲ್ಲಿ ಇದ್ದ ಎಲ್ಲಾ ಸಲಕರಣೆಗಳನ್ನು ಪೆಂಟ್‌ಹೌಸ್ ನಲ್ಲಿ ಇರಿಸಿದ್ದಾಗ ನಾನೇ ಸದ್ರಿ ಕೋಣೆಯ ಬೀಗವನ್ನು ಮುರಿದು ಎಲ್ಲಾ ಸಲಕರಣೆಗಳನ್ನು ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ .

**ಮದ್ಯಾಹ್ನ ಬೋಜನದ ನಂತರ ಪಾಟೀ ಸವಾಲನ್ನು ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.